<u>ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಿದ ದಿನಾಂಕ</u>**<u>: 08-11-2022.</u>**

**ಮುಂದುವರೆದ ಪಾಟೀ ಸವಾಲು - ಶ್ರೀ. ವೈ.ಎನ್.ಎಂ., ವಕೀಲರಿಂದ**

5) ದಾವೆ ಹಾಕಲು ನಾನು ಮಾಹಿತಿ ಕೊಟ್ಟಿಲ್ಲ, ನನ್ನ ತಾಯಿ ಕೊಟ್ಟಿರುತ್ತಾರೆ. ದಾವೆಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲವೆಂದರೆ ವಾರಸುದಾರರಾಗಿ ಕಡತದ ಮೇಲೆ ಬಂದ ನಂತರ ವಾದ ಪತ್ರವನ್ನು ಓದಿದ್ದೇನೆ. ನಮ್ಮ ಕುಟುಂಬಕ್ಕೆ ಸೇರಿದ ಮನೆಯ ಆಸ್ತಿಯನ್ನು ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಅದೇ ರೀತಿ ಕುಟುಂಬಕ್ಕೆ ಸೇರಿದ ಬೇರೆ ಆಸ್ತಿಗಳನ್ನು ಕೂಡ ದಾವೆಯಲ್ಲಿ ಸೇರಿಸಿಲ್ಲವೆಂದರೆ ಸರಿ. ನಮಗೂ ಮತ್ತು ದಾವಾ ಸ್ವತ್ತಿಗೂ ಸಂಬಂಧವಿಲ್ಲದಿದ್ದರೂ ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ 5 ಮತ್ತು 6 ನೇ ಪ್ರತಿವಾದಿಗಳೇ ಪೂರ್ಣವಾಗಿ ಮಾಲೀಕರು ಎಂದರೆ ಇಲ್ಲ, ನಮಗೂ ಭಾಗದ ಹಕ್ಕು ಇರುತ್ತದೆ. ದಾವಾ ಸ್ವತ್ತಿನಲ್ಲಿ 5 ಮತ್ತು 6 ನೇ ಪ್ರತಿವಾದಿಗಳು ಸೈಟುಗಳನ್ನು ರಚಿಸಿ ಬೇರೆಯವರಿಗೆ ಮಾರಾಟ ಮಾಡಿದ್ದು, ಆ ಸೈಟುಗಳನ್ನು ಖರೀದಿ ಮಾಡಿದ ಎಲ್ಲರನ್ನೂ ದಾವೆಗೆ ಸೇರಿಸಿಲ್ಲ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ನಿರ್ಮಾಣವಾದ ಸೈಟುಗಳನ್ನು ಖರೀದಿಸಿದವರು ಅಲ್ಲಿ ಮನೆಗಳನ್ನು ಕಟ್ಟಿಕೊಂಡು ವಾಸ ಮಾಡುತ್ತಿದ್ದಾರೆ ಎಂದರೆ ಆ ಜಾಗಕ್ಕೆ ಕಾಂಪೌಂಡ್ ಇದ್ದು, ಕಾಂಪೌಂಡಿನ ಒಳಗಡೆ ಏನಿದೆ ಎಂದು ನಾನು ನೋಡಿಲ್ಲ. 5 ಮತ್ತು 6 ನೇ ಪ್ರತಿವಾದಿಗಳ ಬೆಲೆ ಬಾಳುವ ಆಸ್ತಿ ಹೊಡೆದುಕೊಳ್ಳಲು ಸುಳ್ಳು ದಾವೆ ತಂದಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲಾ.

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**